ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ : ಸಿ5(1)ಹು.ಸೃ-36/2016-17 ದಿನಾಂಕ : 23/08/2016

# ಸುತ್ತೋಲೆ

ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯಡಿ ಹೊಸದಾಗಿ ಮಂಜೂರಾಗಿರುವ ಹುದ್ದೆಗಳಲ್ಲಿ ಬಡ್ತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ತುಂಬುವ ಬಗ್ಗೆ

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ : ಇಡಿ 36 ಮಾಹಿತಿ 2014 ದಿನಾಂಕ : 26/08/2015.

2. ಸರ್ಕಾರದ ಪತ್ರ ಸಂಖ್ಯೆ : ಇಡಿ 36 ಮಾಹಿತಿ 2016 ದಿನಾಂಕ : 02/07/2016.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಉಲ್ಲೇಖಿತ (1) ರ ಆದೇಶದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಡಿ ಕಲವು ಬೋಧಕೇತರ ವೃಂದದ ಹುದ್ದೆಗಳನ್ನು ಸೃಜಿಸಿ, ಸದರಿ ಹೊಸದಾಗಿ ಸೃಜಿತ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.

2) ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಶೇ 67 ರಷ್ಟು ನೇರ ನೇಮಕಾತಿಯಿಂದ ಹಾಗೂ ಶೇ 33 ರಷ್ಟು ಬಡ್ತಿಯಿಂದ ಭರ್ತಿ ಮಾಡಬೇಕಾಗಿರುತ್ತದೆ. ನೇರ ನೇಮಕಾತಿಯಿಂದ ತುಂಬಬೇಕಾದ ಹುದ್ದೆಗಳನ್ನು ತುಂಬುವ ಪ್ರಕ್ರಿಯೆಯು ಆಯುಕ್ತಾಲಯದಲ್ಲಿ ನಡೆಯುತ್ತಿದ್ದು, ತಮ್ಮ ಹಂತದಲ್ಲಿ ಬಡ್ತಿಗೆ ಲಭ್ಯವಿರುವ ಹುದ್ದೆಗಳನ್ನು ತುಂಬಲು ತಿಳಿಸಿದೆ.

3) ಬೆಂಗಳೂರು ಆಯುಕ್ತಾಲಯದಡಿಯಲ್ಲಿ ಹೊಸದಾಗಿ ಸೃಜಿತವಾಗಿರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಬಡ್ತಿಗಾಗಿ ಲಭ್ಯವಾಗುವ ಜಿಲ್ಲಾವಾರು ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ಜಿಲ್ಲೆಯ ಹೆಸರು | ಬಡ್ತಿಗಾಗಿ ಲಭ್ಯವಾಗುವ ಹುದ್ದೆ (ಶೇ 33) |
|---|---|---|
| 1 | ಬೆಂಗಳೂರು ಗ್ರಾಮಾಂತರ | 1 |
| 2 | ಬೆಂಗಳೂರು ಉತ್ತರ | 1 |
| 3 | ಬೆಂಗಳೂರು ದಕ್ಷಿಣ | 2 |
| 4 | ಚಿಕ್ಕಬಳ್ಳಾಪುರ | 2 |
| 5 | ಚಿತ್ರದುರ್ಗ | 2 |
| 6 | ದಾವಣಗೆರೆ | 2 |
| 7 | ಕೋಲಾರ | 2 |
| 8 | ಮಧುಗಿರಿ | 1 |
| 9 | ಶಿವಮೊಗ್ಗ | 2 |

| | | |
|---|---|---|
| 10 | ತುಮಕೂರು | 2 |
| 11 | ರಾಮನಗರ | 1 |
| 12 | ಚಾಮರಾಜನಗರ | 2 |
| 13 | ಚಿಕ್ಕಮಗಳೂರು | 3 |
| 14 | ದಕ್ಷಿಣ ಕನ್ನಡ | 2 |
| 15 | ಹಾಸನ | 3 |
| 16 | ಕೊಡಗು | 1 |
| 17 | ಮಂಡ್ಯ | 3 |
| 18 | ಮೈಸೂರು | 3 |
| 19 | ಉಡುಪಿ | 2 |
| | ಒಟ್ಟು | **37** |

4) ಮೇಲೆ ವಿವರಿಸಿರುವಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಬಡ್ತಿಗಾಗಿ ಲಭ್ಯವಾಗುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಸಂಬಂಧಿಸಿದ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳು ಬಡ್ತಿನೀಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದೆ. ಯಾವುದೇ ಕಾರಣಗಳಿಗೂ ನೇರ ನೇಮಕಾತಿಗೆ ಲಭ್ಯವಾಗುವ ಹುದ್ದೆಗಳಿಗೆ ಬಡ್ತಿಯನ್ನು ನೀಡುವಂತಿಲ್ಲವೆಂದು ತಿಳಿಸಲಾಗಿದೆ. ಮಾಹಿತಿಗಾಗಿ ಉಲ್ಲೇಖಿತ ಸರ್ಕಾರದ ಆದೇಶ ಹಾಗೂ ಪತ್ರಗಳ ಪ್ರತಿಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ಆಯುಕ್ತರು

23/6/16

ಇವರಿಗೆ :-

1) ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಬೆಳಗಾವಿ ವಿಭಾಗ ಇವರಿಗೆ ಮಾಹಿತಿಗಾಗಿ.
2) ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಎಲ್ಲ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ ಮುಂದಿನ ಕ್ರಮಕ್ಕಾಗಿ.
3) ಕಛೇರಿ ಪ್ರತಿ.

Reg post

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ : ಸಿ5(1)ಹು.ಸೃ-36/2016-17

ದಿನಾಂಕ : 23.08.2016

1) ಅಪರ ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಕಲಬುರ್ಗಿ

2) ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ.

ಮಾನ್ಯರೆ,

ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯಡಿ ಹೊಸದಾಗಿ ಮಂಜೂರಾಗಿರುವ ಹುದ್ದೆಗಳಲ್ಲಿ ತಮ್ಮ ಆಯುಕ್ತಾಲಯಕ್ಕೆ ಲಭ್ಯವಾಗುವ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ಭರ್ತಿ ಮಾಡುವ ಕುರಿತು.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ : ಇಡಿ 36 ಮಾಹಿತಿ 2014 ದಿನಾಂಕ : 26/08/2015.

2.ಸರ್ಕಾರದ ಪತ್ರ ಸಂಖ್ಯೆ : ಇಡಿ 36 ಮಾಹಿತಿ 2016 ದಿನಾಂಕ : 02/07/2016.

3. ರಾಜ್ಯ ಲೆಕ್ಕ ಪತ್ರ ಇಲಾಖೆಗೆ ಬರೆದಿರುವ ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ.23.08.2016

4. ಸರ್ಕಾರದ ಆರ್ಥಿಕ ಇಲಾಖೆಗೆ ಬರೆದಿರುವ ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ.23.08.2016

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1) ರ ಸರ್ಕಾರದ ಆದೇಶದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಡಿ 716 ಬೋಧಕೇತರ ವೃಂದದ ಹುದ್ದೆಗಳನ್ನು ಸೃಜಿಸಲಾಗಿದೆ. ಸದರಿ ಹೊಸದಾಗಿ ಸೃಜಿತ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ಭರ್ತಿ ಮಾಡಲು ಉಲ್ಲೇಖ(2)ರಂತೆ ಅನುಮತಿ ನೀಡಲಾಗಿರುತ್ತದೆ. ಈ ರೀತಿ ಹೊಸದಾಗಿ ಸೃಜಿತವಾದ ಹುದ್ದೆಗಳಲ್ಲಿ ಅಕೌಂಟ್ಸ್ ಅಧೀಕ್ಷಕರು, ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರು ಹುದ್ದೆಗಳನ್ನು ತುಂಬುವಂತೆ ರಾಜ್ಯ ಲೆಕ್ಕಪತ್ರ ಇಲಾಖೆಯನ್ನು ಉಲ್ಲೇಖ(3)ರಂತೆ ಕೋರಲಾಗಿದೆ. ಮುಂದುವರೆದಂತೆ ನೇರನೇಮಕಾತಿಗಾಗಿ ಲಭ್ಯವಾಗುವ ಹುದ್ದೆಗಳನ್ನು ತುಂಬಲು ಉಲ್ಲೇಖ(4)ರಂತೆ ಆರ್ಥಿಕ ಇಲಾಖೆಯ ಅನುಮತಿಗಾಗಿ ಸಲ್ಲಿಸಿದೆ.

ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಕಲಬುರ್ಗಿ ಮತ್ತು ಧಾರವಾಡ ಅಪರ ಆಯುಕ್ತರು, ಅವರ ಆಯುಕ್ತಾಲಯದ ವ್ಯಾಪ್ತಿಯಡಿಯಲ್ಲಿ ಈ ಮುಂದಿನಂತೆ ಜಿಲ್ಲಾವಾರು ಬಡ್ತಿಗಾಗಿ ಲಭ್ಯವಾಗುವ ಹುದ್ದೆಗಳಿಗೆ ಬಡ್ತಿಯನ್ನು ನೀಡುವ ಬಗ್ಗೆ ತಮ್ಮ ಹಂತದಲ್ಲಿ ಕ್ರಮ ಕೈಗೊಳ್ಳಲು ಕೋರುತ್ತಾ ಉಲ್ಲೇಖಿತ ಸರ್ಕಾರದ ಆದೇಶ ಹಾಗೂ ಪತ್ರದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ಧಾರವಾಡ ಮತ್ತು ಕಲಬುರಗಿ ಆಯುಕ್ತಾಲಯದಡಿಯಲ್ಲಿ ಮಂಜೂರಾಗಿರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಲ್ಲಿ ನೇರ ನೇಮಕಾತಿ ಹಾಗೂ ಬಡ್ತಿಗಾಗಿ ವರ್ಗೀಕರಿಸಿರುವ ಜಿಲ್ಲಾವಾರು ವಿವರ

| | ಧಾರವಾಡ ಆಯುಕ್ತಾಲಯ | | | |
|---|---|---|---|---|
| ಕ್ರ. ಸಂ | ಜಿಲ್ಲೆಯ ಹೆಸರು | ಒಟ್ಟು ಮಂಜೂರಾದ ಹುದ್ದೆಗಳು | ನೇರನೇಮಕಾತಿಗಾಗಿ ಲಭ್ಯವಾಗುವ ಹುದ್ದೆಗಳು ( ಶೇ. 67) | ಬಡ್ತಿಗಾಗಿ ಲಭ್ಯವಾಗುವ ಹುದ್ದೆಗಳು (ಶೇ.33) |
| 1 | ಬೆಳಗಾವಿ | 7 | 5 | 2 |
| 2 | ಚಿಕ್ಕೋಡಿ | 8 | 5 | 3 |
| 3 | ಬಾಗಲಕೋಟೆ | 6 | 4 | 2 |
| 4 | ವಿಜಯಪುರ | 7 | 5 | 2 |
| 5 | ಧಾರವಾಡ | 7 | 5 | 2 |
| 6 | ಗದಗ | 6 | 4 | 2 |
| 7 | ಹಾವೇರಿ | 7 | 5 | 2 |
| 8 | ಕಾರವಾರ(ಉತ್ತರ ಕನ್ನಡ) | 5 | 3 | 2 |
| 9 | ಶಿರಸಿ | 6 | 4 | 2 |
| | ಒಟ್ಟು | **59** | **40** | **19** |
| | ಕಲಬುರಗಿ ಆಯುಕ್ತಾಲಯ | | | |
| 1 | ಕಲಬುರಗಿ | 7 | 5 | 2 |
| 2 | ಯಾದಗಿರಿ | 4 | 3 | 1 |
| 3 | ಬೀದರ್ | 5 | 3 | 2 |
| 4 | ಬಳ್ಳಾರಿ | 8 | 5 | 3 |
| 5 | ಕೊಪ್ಪಳ | 4 | 3 | 1 |
| 6 | ರಾಯಚೂರು | 5 | 3 | 2 |
| | ಒಟ್ಟು | **33** | **22** | **11** |

ತಮ್ಮ ನಂಬುಗೆಯ,

(ಸೌಜನ್ಯ)
ಆಯುಕ್ತರು